# ಮಹಿಳೆಯರನ್ನೇ ಬಾಧಿಸುವ ಸಂಧಿವಾತ

**ಸಂಧಿವಾತ ಮಹಿಳೆಯರನ್ನೇ ಈಗೀಗ ಹೆಚ್ಚಾಗಿ ಕಾಡುತ್ತಿದೆ. ಇದಕ್ಕೆ ಹಾರ್ಮೋನಿನ ಏರುಪೇರು ಕಾರಣ ಎಂಬುದು ಮೇಲ್ನೋಟಕ್ಕೆ ಕಂಡುಬಂದರೂ ಬಿಡುವಿಲ್ಲದ ದುಡಿಮೆ, ವಿಶ್ರಾಂತಿಯಿಲ್ಲದ ಕೆಲಸ, ಮನೆ, ಕಚೇರಿ ಎರಡನ್ನೂ ನಿಭಾಯಿಸಿಕೊಂಡು ಹೆಚ್ಚಿನ ಜವಾಬ್ದಾರಿ ಹೊರಬೇಕಾದ ಪ್ರಸಂಗ ಬಂದಿರುವುದು ಈ ಕಾಯಿಲೆ ಮಹಿಳೆಯರನ್ನೇ ಹೆಚ್ಚು ಬಾಧಿಸಲು ಕಾರಣವಾಗುತ್ತದೆ.**

■ **ಉಮಾ ಅನಂತ್**

ಸಂಧಿವಾತ, ಕೀಲು ನೋವು.. ಮುಂತಾದ ಸಮಸ್ಯೆಗಳಿಗೆ ಮಹಿಳೆಯರ ಮೇಲೇ ಏಕೆ ಕಣ್ಣು? ರಾಜ್ಯದ ಶೇಕಡಾ 80ರಷ್ಟು ಮಹಿಳೆಯರನ್ನು ಈ ಕಾಯಿಲೆ ಈಗೀಗ ಬಹುವಾಗಿ ಕಾಡುತ್ತಿದೆ ಎಂಬ ಆತಂಕದ ವಿಚಾರ ಇತ್ತೀಚೆಗೆ ಬೆಳಕಿಗೆ ಬಂದಿದೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಬರುವ 100 ರೋಗಿಗಳಲ್ಲಿ 80ಕ್ಕೂ ಹೆಚ್ಚು ಮಹಿಳೆಯರು ಇದೇ ತೊಂದರೆಗೊಳಗಾಗಿ ಔಷಧ, ವೈದ್ಯರ ಮೊರೆ ಹೋಗುತ್ತಿದ್ದಾರೆ.

ಹೌದು. ಸಂಧಿವಾತ ಸಾಮಾನ್ಯವಾಗಿ ಮಹಿಳೆಯರಲ್ಲೇ ಹೆಚ್ಚು. ಕರ್ನಾಟಕದಲ್ಲಿ ಬಹುಪಾಲು ಮಹಿಳೆಯರು ಮಂಡಿನೋವು ಹಾಗೂ ಇತರ ಭಾಗಗಳ ಕೀಲುನೋವಿನಿಂದ ಬಳಲುತ್ತಿದ್ದಾರೆ. ಅದರಲ್ಲೂ 20ರಿಂದ 60 ವರ್ಷದವರೆಗಿನ ಮಹಿಳೆಯರಲ್ಲಿ ಈ ನೋವು ಅಧಿಕವಾಗಿ ಕಾಣಿಸಿಕೊಳ್ಳುತ್ತದೆ. ಸಂಧಿವಾತದಲ್ಲಿ ಸುಮಾರು 40 ಪ್ರಕಾರಗಳಿವೆ. ಒಂದೊಂದು ಪ್ರಕಾರದಲ್ಲೂ ನೋವಿನ ಪ್ರಮಾಣ ಹಾಗೂ ರೀತಿ ಬೇರೆ ಬೇರೆಯಾಗಿರುತ್ತದೆ. ಕೆಲವು ಬೇಗನೆ ಗುಣವಾಗುವಂಥದ್ದಾದರೆ ಇನ್ನೂ ಕೆಲವು ದೀರ್ಘಾವಧಿ ಬಾಧಿಸುವಂಥದ್ದು ಇರುತ್ತದೆ.

‘ಮೂಳೆ ಸವೆಯುವುದು ಇದರ ಪ್ರಮುಖ ಲಕ್ಷಣ. ಜಾಯಿಂಟ್‌ನಲ್ಲಿ ನೋವು ಜಾಸ್ತಿಯಾದರೆ ದಿನನಿತ್ಯದ ಚಟುವಟಿಕೆಗಳಿಗೆ ಕಷ್ಟವಾಗುತ್ತದೆ. ಕಾಯಿಲೆ ಉಲ್ಬಣವಾದರೆ ಅದು ಬೇರೆ ಅಂಗಗಳಿಗೆ ಹರಡುವ ಸಾಧ್ಯತೆಯೂ ಇದೆ. ಹೀಗಾಗಿ ನೋವು ಕಂಡುಬಂದ ಕೂಡಲೇ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು’ ಎಂದು ಸಲಹೆ ಮಾಡುತ್ತಾರೆ ಬೆಂಗಳೂರಿನ ವಿಕ್ರಮ್ ಆಸ್ಪತ್ರೆಯ ಸಂಧಿವಾತ ತಜ್ಞ ಡಾ. ರಮೇಶ್ ಜೋಯಿಸ್.

‘ಕೆಲವರಿಗೆ ಆನುವಂಶಿಕವಾಗಿಯೂ ಸಂಧಿವಾತ ಬರಬಹುದು. ಮಹಿಳೆಯರಿಗೆ ಲೂಪಸ್ (Lupas) ಎಂಬ ಹಾರ್ಮೋನಿನ ಏರುಪೇರಿನಿಂದ ಸಂಧಿವಾತ ಬರುತ್ತದೆ. ಇನ್ನೂ ಕೆಲವರಿಗೆ ನೋವು ಮೂರು ತಿಂಗಳಿನವರೆಗೆ ಇದ್ದು ಮತ್ತೆ ಹೋಗಿಬಿಡಬಹುದು. ಸಂಧಿಗಳಲ್ಲಿ ಊತ ಬರಬಹುದು. ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಿಗೂ ಈ ಕಾಯಿಲೆ ಬೇಗನೆ ಬರುವ ಸಾಧ್ಯತೆ ಇದೆ. ಅಲ್ಲದೆ ಮಧುಮೇಹ, ಥೈರಾಯ್ಡ್ ಸಮಸ್ಯೆ ಇರುವವರಿಗೆ ಸಂಧಿವಾತ ಬರುವ ಸಾಧ್ಯತೆ ಹೆಚ್ಚು’ ಎಂದು ವಿವರ ನೀಡುತ್ತಾರೆ ಅವರು.

## ಲಕ್ಷಣಗಳೇನು?

ಸಂಧಿವಾತ ನೇರವಾಗಿ ಪರಿಸರ ಅಂಶಗಳಿಂದ ಬಾರದಿರಬಹುದು. ಆದರೆ ವೈರಾಣು ಸೋಂಕು, ಆನುವಂಶಿಕ ಕಾರಣಗಳಿಂದ ಬರುವ ಸಾಧ್ಯತೆ ಇದೆ. ಅತಿಯಾದ ನೋವು, ಊತ ಮತ್ತು ದೇಹದ ವಿವಿಧ ಕೀಲುಗಳ ಕಾರ್ಯ ನಿರ್ವಹಣೆಯಲ್ಲಿ ವೈಫಲ್ಯ ಕಂಡುಬರುವುದು. ಚರ್ಮದಲ್ಲಿ ಕಡಿತ, ಗುಳ್ಳೆಗಳು ಕಾಣಿಸಿಕೊಳ್ಳುವುದು, ಕೀಲು ನೋವು, ಕೂದಲು ಉದುರುವುದು ಮತ್ತು ಬಾಯಿ ಅಲ್ಸರ್ ಮುಂತಾದ ಲಕ್ಷಣಗಳು ಕಂಡುಬರುತ್ತವೆ. ಇದರ ಪರಿಣಾಮ ಮೂತ್ರಪಿಂಡ, ಶ್ವಾಸಕೋಶ, ನರಮಂಡಲ, ಹೃದಯ ಸೇರಿದಂತೆ ದೇಹದ ಇನ್ನಿತರ ಅಂಗಾಂಗಗಳ ಮೇಲೆಯೂ ಬೀರುವ ಸಾಧ್ಯತೆ ಇದೆ. ಈ ಸಮಸ್ಯೆಗಳಿಗೆ ಚಿಕಿತ್ಸೆ ಪಡೆಯದಿದ್ದರೆ ಕೀಲುಗಳು ಶಾಶ್ವತವಾಗಿ ಹಾನಿಗೊಳಗಾಗಬಹುದು.

## ಚಿಕಿತ್ಸೆ ಏನು?

‘ಸಂಧಿವಾತ ಇರುವವರಿಗೆ ಆರಂಭದಲ್ಲಿ ನೋವು ನಿವಾರಕ ಔಷಧಿಗಳನ್ನು ನೀಡಲಾಗುತ್ತದೆ. ನೋವು ಕಡಿಮೆಯಾಗುತ್ತಿದ್ದಂತೆ ಫಿಸಿಯೋಥೆರಪಿಗೆ ಸಲಹೆ ಮಾಡುತ್ತೇವೆ. ನೋವಿನೆಣ್ಣೆ ಮಸಾಜ್, ಬಿಸಿನೀರು ಶಾಖ ಮುಂತಾದ ಪ್ರಾಥಮಿಕ ಚಿಕಿತ್ಸೆ ಸ್ವಲ್ಪಮಟ್ಟಿಗೆ ಸಹಕಾರಿಯಾಗಬಹುದು. ಅಲ್ಲದೆ ನೋವು ಬೇರೆಡೆಗೆ ಹರಡದ ಹಾಗೆ ಚಿಕಿತ್ಸೆ ನೀಡುತ್ತೇವೆ. ಮಂಡಿ ಭಾಗದಲ್ಲಿ ವಿಪರೀತ ನೋವು ಇದ್ದು ನೋವು ನಿವಾರಕ ಔಷಧಿಗಳಿಂದ ವಾಸಿಯಾಗದಿದ್ದರೆ



ಚಿತ್ರ: ಸತೀಶ್ ಬಡಿಗೇರ್